ಒಳಗೆ ಅದೆಂಥ ನಿಗೂಢ ಆಳವಿದೆ. ತಣ್ಣಗೆ ಮುತ್ತುದುರಿದಂತೆ ಬಂದು ಕಾಲು ಮುಟ್ಟುವ ತೆರೆಗಳ ಹಿಂದೆ ಅದೆಂಥ ಅರಿಯದ ಲೋಕವಿದೆ. ನಮ್ಮ ಬದುಕೂ ಇಷ್ಟೇ ಅಲ್ಲವೇ! ಅನಿತಾ. ನಾವ್ಯಾಕೆ ಗಂಡ ಹೆಂಡತಿ ಅನ್ನುವ ಸಂಬಂಧಕ್ಕೆ ಅಷ್ಟೊಂದು ಮಹತ್ವ ಕೊಡುತ್ತೇವೊ ಏನೊ ಅರ್ಥವಾಗದು. ಕಣ್ಣಿಗೆ ಕಾಣುವ ಆದರ್ಶ ದಾಂಪತ್ಯದ ಹಿಂದೆ ನೂರು ನೋವೂ ಇದ್ದೀತು. ಹೇಳಿಕೊಂಡು ತಿರುಗುವವರ್‍ಯಾರು? ಅಷ್ಟಕ್ಕೂ ಯಾಕೆ ಹೇಳಿಕೊಂಡು ತಿರುಗಬೇಕು. ಗಂಡ, ಸಾಂಗತ್ಯ ಒಂದು ಸುಖ. ನಾನೂ ಸಾಕಷ್ಟು ಪಡೆದಿದ್ದೇನೆ. ಅಷ್ಟಕ್ಕೂ ವಿಜ್ಜುವನ್ನು ಬಿಡೋದು ಅಂಥ ದೊಡ್ಡ ಸಮಸ್ಯೆಯೇ ಅಲ್ಲ. ನಾನೂ ಆರ್ಥಿಕವಾಗಿ ಯಾರ ಮೇಲೂ ಅವಲಂಬಿತಳಲ್ಲ. ಆದರೆ ನಾವು, ನಮ್ಮ ಅಪ್ಪ ಅಮ್ಮ ಅಣ್ಣಂದಿರು, ಎಲ್ಲರ ತಪ್ಪುಗಳನ್ನು ಕ್ಷಮಿಸಿ ಬಿಡುತ್ತೇವೆ. ಎಂತೆಂಥ ಅಪ್ಪಂದಿರು ಅಣ್ಣಂದಿರನ್ನು ಈ ಪ್ರಪಂಚದ ಹೆಣ್ಣುಮಕ್ಕಳು ನೋಡಿಲ್ಲ. ಎಲ್ಲಾದರೂ ಅಪ್ಪನನ್ನು ಬಿಟ್ಟೆ ಎಂದು ಯಾರಾದರೂ ಹೇಳಿದ್ದಿದೆಯಾ!... ಸಂಗಾತಿಯ ವಿಷಯದಲ್ಲಿ ಮಾತ್ರ ನಂನಮ್ಮ ಅಹಂಗೆ ಘಾಸಿಯಾಗುತ್ತದೆ ಅನ್ನುವ ಕಾರಣಕ್ಕೆ ದೂರ ಹೋಗುವ ನಿರ್ಧಾರಕ್ಕೆ ಬರುತ್ತೇವೆ ಅನ್ಸುತ್ತೆ, ಕಣೆ' ಅನಿತಾ ಸುಮ್ಮನೇ ಪಲ್ಲವಿಯ ಕೈಯನ್ನು ಅಕ್ಕರೆಯಿಂದ ಅಮುಕಿದಳು. 'ವಿಜ್ಜು ಹತ್ರ ಮಾತಾಡೋ ಪ್ರಯತ್ನ ಮಾಡೀದೀಯಾ, ಪಲ್ಲು' ಎಂದಾಗ ನೀರಸ ನಗೆ ನಕ್ಕು 'ಇಲ್ಲಾ... ವಿಜ್ಜು ಹತ್ರ ನಾನು ಗಂಭೀರವಾಗಿ ಮಾತೇ ಆಡಿಲ್ಲ. ಯಾಕೋ ಮಾತಾಡೋಣಾ ಅಂತ ಅನಿಸಲೇ ಇಲ್ಲ. ಮಾತಾಡಿದ್ರೂ ಉತ್ತರ ಸಿಕ್ಕೀತು ಅನ್ನೋ ಭರವಸೆಯೂ ಇಲ್ಲ. ಎಲ್ಲವನ್ನು ಕೆದಕಿದರೆ ಸಿಗೋದು ಬರಿ ಮಣ್ಣು. ಇದೆಲ್ಲ ಹೀಗೇ ಇದ್ದು ಬಿಡಲಿ. ಇದೂ ಒಂಥರಾ ಚೆನ್ನ' ನಕ್ಕಳು. ವಿಜ್ಜುನ ಕುತ್ತಿಗೆಗೆ ಜೋತು ಬೀಳುವ ಪವಿತ್ರಳ ಯೋಚನೆ ಬಂದೊಡನೆ ಪಲ್ಲವಿಯ ಮನಸ್ಸು ಕರಗಿ ನೀರಾಯಿತು. ಅಪ್ಪನ ಸಮೃದ್ಧ ಪ್ರೀತಿ ಪಡೆದು ದೊಡ್ಡವಳಾದ ತಾನು ಪವಿತ್ರಳ ಪಾಲಿನ ಪ್ರೀತಿಯನ್ನು ಕಿತ್ತುಕೊಳ್ಳಬಾರದು. ಅಷ್ಟಕ್ಕೂ ಗಂಡನೂ 'ಜಸ್ಟ್ ಅ ಪಾರ್ಟ್ ಆಫ್ ಲೈಫ್' ಅಷ್ಟೇ. ಅವನ ಪಾಡಿಗೆ ಅವನಿರಲಿ. ಈಗಿರುವಂತೆಯೆ ಬದುಕು ಸಾಗಲಿ... ಹಗುರವಾಯಿತು ಪಲ್ಲವಿಯ ಮನಸ್ಸು. ಅನಿತಾಳನ್ನು ತಬ್ಬಿಕೊಂಡಳು. 'ಥಾಂಕ್ಯೂ, ಅನಿತಾ. ನನ್ನೊಳಗನ್ನು ಪರಿಚಯಿಸಿದ್ದಕ್ಕಾಗಿ.' ನಿರಾಳವಾಯಿತು ಮನಸ್ಸು. ಯಾವ ಸಿಕ್ಕೂ ಉಳಿಯಲಿಲ್ಲ.

ಗೋವಾದಿಂದ ಹಗುರ ಮನದಿಂದ ಪಲ್ಲವಿ ಮರಳಿದಳು. ಬೆಳಗು ಹೆಚ್ಚು ಶುಭ್ರವಾಗಿ ಕಂಡಿತು. ಬ್ಯಾಂಕಿಗೆ ಬಂದೊಡನೆ ಸುಂದರ್, 'ಏನ್ ಮೇಡಂ ಗೋವಾಗೆ ಒಬ್ರೇ ಹೋಗಿದ್ರಂತೆ' ಎಂದಾಗ, 'ಹೌದು, ನೀವೂ ಒಮ್ಮೆ ಒಬ್ಬರೇ ಹೋಗಿ ಬನ್ನಿ; ಇನ್‌ಫ್ಯಾಕ್ಟ್ ಪ್ರತಿಯೊಬ್ಬರೂ ಸೋಲೊ ಟ್ರಿಪ್ ಹೋಗಬೇಕು. ನಂನಮ್ಮ ಪರಿಚಯ ಚೆನ್ನಾಗಿ ಆಗುತ್ತೆ' ಎಂದು ಜೋರಾಗಿ ನಕ್ಕಳು. ಲಂಚ್ ಟೈಮಲ್ಲಿ ಅನಿತಾಳ ಮೆಸೇಜು, 'ಹಾಯ್ ಡಿಯರ್, ಜೋಸ್ ಅಂತ ನನ್ನ ಫ್ರೆಂಡ್ ಇದಾನೆ. ಅಡ್ವೆಂಚರ್ ಕ್ಲಬ್ ನಡೆಸ್ತಾನೆ. ಈ ಸಾರಿ ಜೂನ್‌ಗೆ ಲಡಾಖಿಗೆ  ಟ್ರಿಪ್ ಕರ್ಕೊಂಡು ಹೋಗ್ತಾನೆ, ಆರ್ ಯು ಇಂಟರೆಸ್ಟೆಡ್'. 'ಯೆಸ್ ಪ್ಲೀಸ್' ಮೆಸೇಜು ಕುಟ್ಟಿದಳು ಪಲ್ಲವಿ.

**ದೀಪಾ ಫಡ್ಕೆ**

ಹರಿದಾಸ ಸಾಹಿತ್ಯದಲ್ಲಿ ಪಿಎಚ್.ಡಿ. ಪದವಿ ಪಡೆದಿರುವ ದೀಪಾ ಅವರ 'ಋತ', 'ಹರಪನಹಳ್ಳಿ ಭೀಮವ್ವ' ಸೇರಿದಂತೆ ಏಳು ಪುಸ್ತಕಗಳು ಪ್ರಕಟವಾಗಿವೆ. ಪತ್ರಿಕೆಗಳಿಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.